ಪ್ರಬಂಧದ ಅನುಬಂಧ
ಯುಗಾದಿಯ ಸಂಬಂಧ

# ಸುಧಾ

## ಯುಗಾದಿ ವಿಶೇಷಾಂಕ-2024



ಎದೆಯ ಭಿತ್ತಿಯಲಿ ಪಿಸುಗುಡುತಿರುವ ಭಾವಝುರಿ, ನೆನಪುಗಳ ನವಿಲುಗರಿ, ವಿಚಾರಗಳ ಒಳಸುರಿ – ಎಲ್ಲವೂ ಜೊತೆಗೂಡಿ ಹದವಾದ ಪ್ರಬಂಧವೊಂದು ನಿಮ್ಮೊಳಗೆ ಮಿಸುಕಾಡುತ್ತಿದೆಯೆ? ಎದೆ ತುಂಬಿಸಿಕೊಳ್ಳಲು 'ಸುಧಾ ಯುಗಾದಿ ಸಂಚಿಕೆ 2024' ಮೈಯೆಲ್ಲ ಕಣ್ಣಾಗಿದೆ, ತೆರೆದ ಬಾಹುಗಳಿಂದ ಹೊಸ ಪ್ರಬಂಧಗಳನ್ನು ಸ್ವಾಗತಿಸುತ್ತಿದೆ. ಪ್ರಬಂಧ ಪ್ರಕಾರದಲ್ಲಿ ಹೊಸ ಸಾಧ್ಯತೆ ಮತ್ತು ಪ್ರಯೋಗಗಳನ್ನು ಉತ್ತೇಜಿಸಲು ಈ ಸ್ಪರ್ಧೆ.

**ಒಂದನೇ ಬಹುಮಾನ: 15000**
**ಎರಡನೇ ಬಹುಮಾನ: 12000**
**ಮೂರನೇ ಬಹುಮಾನ: 10000**



- ಪ್ರಬಂಧಗಳು 2000 ಶಬ್ದ ಮೀರದಿರಲಿ.
- ಪ್ರಬಂಧಕ್ಕೆ ನಿರ್ದಿಷ್ಟ ವಸ್ತುವಿನ ಕಟ್ಟುಪಾಡಿಲ್ಲ. ಯಾವ ವಿಷಯದ ಬಗ್ಗೆಯಾದರೂ ಬರೆಯಬಹುದು.
- ಸ್ಪರ್ಧೆಗೆ ಕಳುಹಿಸುವ ಪ್ರಬಂಧಗಳು ಪತ್ರಿಕೆ, ನಿಯತಕಾಲಿಕೆ, ಬ್ಲಾಗ್, ಜಾಲತಾಣ, ಸಾಮಾಜಿಕ ಜಾಲತಾಣ ಸೇರಿದಂತೆ ಯಾವುದೇ ಮಾಧ್ಯಮದಲ್ಲಿ ಪ್ರಕಟಗೊಂಡಿರಬಾರದು.
- ಬರಹದ ಜೊತೆ ಪ್ರತ್ಯೇಕ ಹಾಳೆಯಲ್ಲಿ ವಿಳಾಸ, ದೂರವಾಣಿ ಸಂಖ್ಯೆ, ಇಮೇಲ್ ವಿಳಾಸ ಬರೆಯಿರಿ. ಜೊತೆಗೆ ನಿಮ್ಮ ಫೋಟೊ ಕೂಡ ಇರಲಿ.
- ಲಕೋಟೆ ಮೇಲೆ ಅಥವಾ ಇಮೇಲ್‌ನಲ್ಲಿ 'ಯುಗಾದಿ ಪ್ರಬಂಧ ಸ್ಪರ್ಧೆಗೆ' ಎಂದು ನಮೂದಿಸಿ.
- ಬಹುಮಾನಿತ ರಚನೆಗಳನ್ನು ಯಾವಾಗ ಬೇಕಾದರೂ ಯಾವ ಸ್ವರೂಪದಲ್ಲಾದರೂ ಬಳಸುವ ಹಕ್ಕನ್ನು 'ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್' ಕಾದಿರಿಸಿಕೊಂಡಿದೆ.
- 'ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್' ಸಿಬ್ಬಂದಿ ಮತ್ತು ಅವರ ಕುಟುಂಬ ವರ್ಗದವರು ಸ್ಪರ್ಧೆಯಲ್ಲಿ ಭಾಗವಹಿಸುವಂತಿಲ್ಲ.
- ನುಡಿ–ಯುನಿಕೋಡ್‌ನಲ್ಲಿ ಪ್ರಬಂಧಗಳನ್ನು ಇಮೇಲ್ ಮಾಡಬಹುದು.

**ಕೊನೆಯ ದಿನಾಂಕ**
**ಫೆಬ್ರುವರಿ 10, 2024**

ವಿಳಾಸ:
ಸಂಪಾದಕರು
ಸುಧಾ ಯುಗಾದಿ ವಿಶೇಷಾಂಕ
ನಂ. 75, ಮಹಾತ್ಮ ಗಾಂಧಿ ರಸ್ತೆ,
ಬೆಂಗಳೂರು 560001

ಇಮೇಲ್: **ugadi@sudha.co.in**



## ಸುಧಾ

'ಸುಧಾ' ಜೊತೆಗಿನ ಓದುಗರ ಒಡನಾಟ

60 ವಜ್ರ ಮಹೋತ್ಸವ

### ಕನ್ನಡಿಗರ ಅಭಿಮಾನ 'ಸುಧಾ'

'ಸುಧಾ' ವಾರಪತ್ರಿಕೆ ವಜ್ರಮಹೋತ್ಸವ ಆಚರಿಸುತ್ತಿರುವುದು ಕನ್ನಡಿಗರೆಲ್ಲರೂ ಅಭಿಮಾನ ಪಡಬೇಕಾದ ಸಂಗತಿ.

ನಾನು ಸುಮಾರು 40–45 ವರ್ಷಗಳಿಂದ (9–10 ವಯಸ್ಸಿನಿಂದಲೇ) 'ಸುಧಾ' ಓದುತ್ತಿದ್ದೇನೆ. ನಮಗಾಗ ಪತ್ರಿಕೆ ತರುವಷ್ಟು ಆರ್ಥಿಕ ಸಾಮರ್ಥ್ಯ ಇರಲಿಲ್ಲ. ಹೀಗಾಗಿ ನಮ್ಮ ನೆರೆಮನೆಯವರ ಬಳಿ 'ಸುಧಾ' ಬರುವ ದಿನವೇ ಹೋಗಿ ಕಾದು ಕೂತು ಅಲ್ಲೇ ಓದಿ ವಾಪಸ್ ಕೊಟ್ಟು ಬರುತ್ತಿದ್ದೆ. ಆಗ ಫ್ಯಾಂಟಮ್, ಪೂಜಾ, ರಾಮನ್ ಮುಂತಾದ ಕಾಮಿಕ್ಸ್ ಬರುತ್ತಿದ್ದವು. ಆನಂತರ ನಮ್ಮ ಮನೆಗೇ 'ಸುಧಾ' ತರಲು ಆರಂಭಿಸಿದೆವು.

'ಸುಧಾ' ಇಲ್ಲದಿದ್ದರೆ ಏನೋ ಕಳೆದುಕೊಂಡ ಭಾವ ಆವರಿಸುತ್ತದೆ. ಅಷ್ಟರಮಟ್ಟಿಗೆ ನನ್ನ ಬದುಕಿನಲ್ಲಿ ಹಾಸುಹೊಕ್ಕಾಗಿದೆ. ನನ್ನ ಹಾಗೂ 'ಸುಧಾ' ಒಡನಾಟದ ಬಗ್ಗೆ ಎಷ್ಟು ಹೇಳಿದರೂ ಕಡಿಮೆಯೇ.

—ಎಸ್.ವಿ. ಗೋಪಾಲ್ ರಾವ್, ಬೆಂಗಳೂರು

### ಮರುಪ್ರಕಟಣೆ ಮಾಡಿ

'ಸುಧಾ' ಪತ್ರಿಕೆಯನ್ನು ನನ್ನ ಬಾಲ್ಯದಿಂದಲೂ ಓದುತ್ತಿದ್ದೇನೆ, ನನಗೆ ಬಹಳ ಪ್ರಿಯವಾದ ಪತ್ರಿಕೆ. 70 ಮತ್ತು 80ರ ದಶಕದಲ್ಲಿ ಪ್ರಕಟವಾಗುತ್ತಿದ್ದ ಜನಪ್ರಿಯ ಧಾರಾವಾಹಿಗಳನ್ನು ಮತ್ತೊಮ್ಮೆ ಪ್ರಕಟಿಸಿ. ತುಳಸಿ, ದುಡ್ಡು ದುಡ್ಡು, ಬೆಳದಿಂಗಳ ಬಾಲೆ, ಮಣ್ಣಿನ ದೋಣಿ, ಉರಿಯುತಿದೆ ಕೆಂಪು ದೀಪ, ನೇಣುಗಂಬದ ನೆರಳಿನಲ್ಲಿ, ದಿಬ್ಬದ ಬಂಗಲೆ... ಹೀಗೆ ಬಹಳಷ್ಟು ಕಾದಂಬರಿ, ಕಥೆಗಳಿವೆ. ಇವುಗಳನ್ನು ಮತ್ತೊಮ್ಮೆ ಪ್ರಕಟಿಸಬೇಕೆಂಬುದು ನನ್ನ ವಿನಂತಿ.

—ನರಹರಿ ಎಂ.ಎಸ್.

### ಎಂದಿಗೂ ಬಿಡದ ನಂಟು

40 ವರ್ಷಗಳ ಹಿಂದೆ ನಾನು ಹತ್ತನೇ ತರಗತಿ ಪರೀಕ್ಷೆ ಬರೆಯುವ ದಿನವೂ 'ಸುಧಾ'ದಲ್ಲಿನ ಧಾರಾವಾಹಿ ಓದಿ ಪರೀಕ್ಷೆ ಬರೆಯಲು ಹೋಗಿದ್ದ ನೆನಪು ಹಸಿಯಾಗಿದೆ. ಪತ್ರಿಕೆ ಓದುತ್ತಲೇ ಪ್ರತಿದಿನವೂ ತಿಂಡಿ ತಿನ್ನುವ ಅಭ್ಯಾಸ ನನಗಿತ್ತು. ಅದರಲ್ಲಿನ ಪದಬಂಧವನ್ನು ತುಂಬುವುದೆಂದರೆ ಎಲ್ಲಿಲ್ಲದ ಉತ್ಸಾಹ. 'ಸುಧಾ', ನಿನ್ನ 60ನೇ ಹುಟ್ಟುಹಬ್ಬವು ಇಂದಿನ ಮಕ್ಕಳಲ್ಲಿ ಓದುವ ಹವ್ಯಾಸವನ್ನು ಹೆಚ್ಚಿಸಲಿ ಎಂಬುದು ನನ್ನ ಆಶಯ.

—ಜಿ.ಎಸ್. ಲಾವಣ್ಯಾ ಚಂದ್ರಶೇಖರ್, ಚಿಕ್ಕಮಗಳೂರು